# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 1990 |
| 2 | ಸದಸ್ಯರ ಹೆಸರು | : ಡಾ|| ಆರತಿ ಕೃಷ್ಣ<br>(ನಾಮನಿರ್ದೇಶನ ಹೊಂದಿದವರು) |
| 3 | ಉತ್ತರಿಸಬೇಕಾದ ದಿನಾಂಕ | : 24.03.2026 |
| 4 | ಉತ್ತರಿಸುವವರು | : ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | M/s ACC Ltd., ರವರು ಕಲಬುರಗಿಯ ವಾಡಿಯ ಕಣ್ಣೂರು ಲೈಮ್‌ಸ್ಟೋನ್ ಬ್ಲಾಕ್‌ನಲ್ಲಿ ಗಣಿಗಾರಿಕೆ ಮಾಡಲು ಪಡೆದ ಗುತ್ತಿಗೆ ಅವಧಿ ಮುಕ್ತಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸದರಿ ಕಂಪನಿಯವರು ರಾಜ್ಯ ಸರ್ಕಾರಕ್ಕೆ ಪಾವತಿಸಬೇಕಾದ ರಾಜಧನ/ ಬಾಡಿಗೆ/ ದಂಡದ ಒಟ್ಟು ಮೊತ್ತ ರೂ.850.21 ಕೋಟಿಗಳನ್ನು ಪಾವತಿಸದೆ, ಸದರಿ ಸ್ಥಳದಲ್ಲಿ ಅನಧಿಕೃತವಾಗಿ ಗಣಿಗಾರಿಕೆ ಮಾಡುತ್ತಿರುವುದರ ವಿರುದ್ಧ (ಕಾನೂನು ಇಲಾಖೆಯ ಅಭಿಪ್ರಾಯದಲ್ಲಿ ಪ್ರಸ್ತಾಪಿಸಿರುವಂತೆ) ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿರುತ್ತದೆ; | M/s.ACC Ltd., ರವರು ಕಲಬುರಗಿಯ ವಾಡಿಯ ಕಣ್ಣೂರು ಲೈಮ್‌ಸ್ಟೋನ್ ಬ್ಲಾಕ್‌ನ್ನು ಹರಾಜಿನಲ್ಲಿ ಪಡೆದಿದ್ದು, Letter of Intent ನ್ನು ಮಾತ್ರ ನೀಡಲಾಗಿದ್ದು, Letter of Intent ನ ಅವಧಿ ಮುಕ್ತಾಯಗೊಂಡಿರುವುದರಿಂದ ಗಣಿ ಗುತ್ತಿಗೆ ಮಂಜೂರು ಮಾಡಿರುವುದಿಲ್ಲ.<br><br>M/s.ACC Ltd., ರವರು ರಾಜ್ಯ ಸರ್ಕಾರಕ್ಕೆ ಪಾವತಿಬೇಕಾದ ಮೊತ್ತ ಕಣ್ಣೂರು ವಾಡಿ ಲೈಮ್ ಸ್ಟೋನ್ ಬ್ಲಾಕ್‌ಗೆ ಸಂಬಂಧಿಸಿರುವುದಿಲ್ಲ ಮತ್ತು ಸದರಿ ಬ್ಲಾಕ್‌ನಲ್ಲಿ ಯಾವುದೇ ರೀತಿಯ ಗಣಿಗಾರಿಕೆ ಮಾಡಿರುವುದಿಲ್ಲ / ಮಾಡುತ್ತಿರುವುದಿಲ್ಲ.<br><br>ಆದರೆ, M/s.ACC Ltd., ಕಂಪನಿಗೆ ಕಲಬುರಗಿ ಜಿಲ್ಲೆ ಚಿತ್ತಾಪುರ ತಾಲ್ಲೂಕು ಇಂಗಳಗಿ ಮತ್ತು ರಾವೂರು ಗ್ರಾಮಗಳ ವ್ಯಾಪ್ತಿಯಲ್ಲಿ 471.03 ಹೆಕ್ಟೇರ್ ಪ್ರದೇಶದಲ್ಲಿ ಮತ್ತೊಂದು ಸುಣ್ಣದ ಕಲ್ಲಿನ ಗಣಿ ಗುತ್ತಿಗೆ ಸಂಖ್ಯೆ:2641 ಮಂಜೂರು ಮಾಡಲಾಗಿರುತ್ತದೆ. ಸದರಿ ಗಣಿ ಗುತ್ತಿಗೆಗೆ ಸಂಬಂಧಿಸಿದಂತೆ ರಾಜಧನ/ದಂಡ ಸೇರಿ ಒಟ್ಟು ರೂ.850.21 ಕೋಟಿಗಳು ಬಾಕಿ ಇರುತ್ತದೆ.<br><br>ಸದರಿ ಬಾಕಿ ಮೊತ್ತ ಪಾವತಿಗೆ ಸಂಬಂಧಿಸಿದಂತೆ ಕಂಪನಿಯು ತಕರಾರು ಮಾಡಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ W.P.No:25298/2024 ಮತ್ತು 18655/2025 ಗಳನ್ನು ಸಲ್ಲಿಸಿದ್ದು, ಸದರಿ ಪ್ರಕರಣಗಳು ವಿಚಾರಣಾ ಹಂತದಲ್ಲಿರುತ್ತವೆ.<br><br>ಮುಂದುವರೆದು, M/s.ACC Ltd., ರವರು ಇಲಾಖೆಗೆ ಪಾವತಿಸಬೇಕಾದ ಪರಿಷ್ಕೃತ ರಾಜಧನ ಬಾಕಿ ರೂ. 367 ಕೋಟಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಗಣಿ ಮಂತ್ರಾಲಯದ ಪರಿಷ್ಕರಣಾ ಪ್ರಾಧಿಕಾರದಲ್ಲಿಯೂ ಪ್ರಶ್ನಿಸಿದ್ದು, ಪರಿಷ್ಕರಣಾ ಪ್ರಾಧಿಕಾರವು ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಲು ಆದೇಶ ಹೊರಡಿಸಿರುತ್ತದೆ. ಸದರಿ ಆದೇಶವನ್ನು ರಾಜ್ಯ ಸರ್ಕಾರವು W.P No:36850/2025 ನ್ನು ದಾಖಲಿಸಿದ್ದು, ಪ್ರಕರಣವು ವಿಚಾರಣಾ ಹಂತದಲ್ಲಿ ಇರುತ್ತದೆ. |

| | | |
|---|---|---|
| (ಆ) | ಸದರಿ ಸಂಸ್ಥೆಯವರು ಸರ್ಕಾರಕ್ಕೆ ಪಾವತಿಸಬೇಕಾದ ಎಲ್ಲಾ ಬಾಕಿಗಳನ್ನು ಪಾವತಿಸುವರೆಗೂ ಪ್ರಸ್ತಾಪಿತ ಕಂಪನಿಗೆ ಗಣಿಗಾರಿಕೆ ಮಾಡಲು ಅವಕಾಶ ಮಾಡಿಕೊಡದಂತೆ ಕಾನೂನು ಇಲಾಖೆ ಮುಖಾಂತರ ಗಣಿಗಾರಿಕೆ ಇಲಾಖೆಗೆ ಲಿಖಿತ ಅಭಿಪ್ರಾಯ ನೀಡಿದ್ದರೂ ಕೂಡ, ಕಾನೂನು ಇಲಾಖೆಯ ಅಭಿಪ್ರಾಯದಂತೆ M/s ACC Ltd., ರವರ ಕಂಪನಿಯವರ ವಿರುದ್ಧ ಯಾವುದೇ ಕಾನೂನು ಕ್ರಮವಾಗದೆ, ಈ ಕಂಪನಿಗೆ ಗುತ್ತಿಗೆ ನವೀಕರಣ ಮಾಡುವ ಕುರಿತು ಕೇಂದ್ರ ಸರ್ಕಾರದವರಿಗೆ ಪತ್ರ ಬರೆದಿರುವುದು ಸರ್ಕಾರದ ಗಮನದಲ್ಲಿದೆಯೇ ; | MMDR ತಿದ್ದುಪಡಿ ಕಾಯ್ದೆ 2015 ರಲ್ಲಿ ಗಣಿ ಗುತ್ತಿಗೆಗಳ ನವೀಕರಣ ಬದಲಾಗಿ ಗಣಿಗುತ್ತಿಗೆಗಳನ್ನು ಪರಿಭಾವಿತ ಅವಧಿ ವಿಸ್ತರಣೆಗೆ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಿದೆ.<br><br>ಭಾರತ ಸರ್ಕಾರದ ಎಂಎಂಡಿಆರ್ ಕಾಯ್ದೆ ಮತ್ತು Mineral (Auction) Rules-2015 ರಂತೆ ಗಣಿ ಪ್ರದೇಶಗಳನ್ನು ಹರಾಜು ಮೂಲಕ ಗಣಿ ಗುತ್ತಿಗೆಗಳನ್ನು ನೀಡಲಾಗುತ್ತದೆ.<br><br>ಅದರಂತೆ, M/s ACC Ltd., ರವರು ಹರಾಜು ಮೂಲಕ ಪಡೆದ ಕಣ್ಣೂರುವಾಡಿ ಸುಣ್ಣದ ಕಲ್ಲಿನ ಬ್ಲಾಕ್ ನ ಪ್ರಕರಣದಲ್ಲಿ Letter of Intent ಅವಧಿ ವಿಸ್ತರಣೆ ಸಂಬಂಧ ಸರ್ಕಾರವು ಕಾನೂನು ಇಲಾಖೆ ಅಭಿಪ್ರಾಯ ಪಡೆದಿರುತ್ತದೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಕ್ಷಿಪ್ತ ಮಾಹಿತಿ ಈ ಕೆಳಕಂಡಂತಿದೆ.<br><br>ಗುಲಬರ್ಗ ಜಿಲ್ಲೆ, ಚಿತ್ತಾಪುರ ತಾಲ್ಲೂಕು, ಕಣ್ಣೂರುವಾಡಿ ಮತ್ತು ಬೊಮ್ಮನಹಳ್ಳಿ ಗ್ರಾಮಗಳಲ್ಲಿ ಸುಣ್ಣದ ಕಲ್ಲಿನ ಬ್ಲಾಕ್ ನ್ನು ದಿನಾಂಕ:05.10.2020 ರ Notification & Notice inviting tender ರಡಿ ದಿನಾಂಕ:19.12.2020 ರಂದು ನಡೆದ ಇ-ಹರಾಜಿನಲ್ಲಿ ಮೆ\|\| ಎಸಿಸಿ ಲಿಮಿಟೆಡ್ ರವರು 35.15 % ಅತೀ ಹೆಚ್ಚು ಬಿಡ್ ಮೊತ್ತಕ್ಕೆ ಪಡೆದಿರುತ್ತಾರೆ.<br><br>ಅದರಂತೆ, ದಿನಾಂಕ: 19.12.2020 ರಂದು ನಿಯಮಾನುಸಾರ Preferred Bidder ಎಂದು ಘೋಷಿಸಲಾಗಿರುತ್ತದೆ. Mineral (Auction) Rules-2015 ರಂತೆ ಅಂದು ಚಾಲ್ತಿಯಲ್ಲಿದ್ದ ನಿಯಮಾವಳಿಗಳಂತೆ ಬಿಡ್ದುದಾರರು ಹರಾಜಾದ ಪ್ರದೇಶದ upfront payment ಮೂರು ಕಂತುಗಳಲ್ಲಿ (10%, 10% ಮತ್ತು 80% of upfront payment) ಪಾವತಿಸಬೇಕಾಗಿರುತ್ತದೆ.<br><br>ಈ ಪ್ರಕರಣದಲ್ಲಿ, ರೂ.78.59 ಕೋಟಿ Upfront Payment ರ ಮೊದಲನೇ ಕಂತನ್ನು ದಿನಾಂಕ: 28.12.2020 ರಂದು ಪಾವತಿಸಲಾಗಿರುತ್ತದೆ. ತದನಂತರ M/s ACC Ltd., ರವರಿಗೆ Letter of Intent ನ್ನು ದಿನಾಂಕ:04.01.2021ರಂದು ನೀಡಲಾಗಿರುತ್ತದೆ.<br><br>ಸದರಿ Letter of Intent ಅವಧಿ 03 ವರ್ಷ ಮಾತ್ರವಿದ್ದು, ಮತ್ತೆ 02 ವರ್ಷಗಳ ಅವಧಿಗೆ ವಿಸ್ತರಿಸಲು ನಿಯಮ 10(6)ರಡಿ ಅವಕಾಶವಿರುತ್ತದೆ. ಸದರಿ ನಿಯಮದ ಉದ್ಧೃತ ಭಾಗ ಈ ಕೆಳಕಂಡಂತಿದೆ:<br>Provided further that the State Government may allow a further period of two years for execution of the Mining Lease Deed if the reasons for delay were beyond the control of the preferred bidder.<br>ಕಣ್ಣೂರು ವಾಡಿ ಸುಣ್ಣದಕಲ್ಲು ಬ್ಲಾಕ್ Letter of Intent ಅವಧಿಯು ಮೂಲತಃ ದಿನಾಂಕ:03.01.2024 ಕ್ಕೆ ಅಂತ್ಯಗೊಂಡಿರುತ್ತದೆ. 02 ವರ್ಷ ಅವಧಿ ವಿಸ್ತರಿಸಲು |

| | | |
|---|---|---|
| | | ರಾಜ್ಯ ಸರ್ಕಾರಕ್ಕೆ ಮೇಲ್ಕಂಡ ನಿಯಮಗಳಲ್ಲಿ ಅವಕಾಶವಿದ್ದು, ಅದರಂತೆ ದಿನಾಂಕ:03.01.2026ರ ವರೆಗೆ ವಿಸ್ತರಿಸಲಾಗಿರುತ್ತದೆ. ತದನಂತರ ಅವಧಿ ವಿಸ್ತರಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿರುವುದಿಲ್ಲ.<br><br>ಮುಂದುವರೆದು, **M/s ACC Ltd.**, ರವರು ಹೊಂದಿದ್ದ ಗಣಿ ಗುತ್ತಿಗೆ ಸಂಖ್ಯೆ:2641ರ ಮೇಲಿನ ಬಾಕಿ ರಾಜಧನ ಮತ್ತು ದಂಡ ಹಾಗೂ ಈ ವಿಷಯಕ್ಕೆ ಸಂಬಂಧಿಸಿದಂತೆ ಉಚ್ಛ ನ್ಯಾಯಾಲಯದಲ್ಲಿ ಪ್ರಕರಣಗಳು ಬಾಕಿ ಇದ್ದ ಕಾರಣ ಗಣಿ ಗುತ್ತಿಗೆ ಮಂಜೂರು ಮಾಡಿರುವುದಿಲ್ಲ.<br><br>MMDR ಕಾಯ್ದೆ ಮತ್ತು Mineral (Auction) Rules-2015ರ ನಿಯಮಗಳನ್ನು ರೂಪಿಸುವ ಅಧಿಕಾರವು ಕೇಂದ್ರ ಸರ್ಕಾರವು ಹೊಂದಿರುತ್ತದೆ.<br><br>ಕಣ್ಣೂರುವಾಡಿ ಲೈಮ್‌ಸ್ಟೋನ್ ಬ್ಲಾಕ್‌ನ ಪ್ರಕರಣದಲ್ಲಿ , **M/s ACC Ltd.**, ರವರು ಮನವಿ ಸಲ್ಲಿಸಿ, ಗಣಿ ಗುತ್ತಿಗೆ ಕಾರ್ಯಗತಗೊಳಿಸಲು ವಿನಂತಿಸಿದ್ದು, Letter of Intent ಅವಧಿ ಮುಕ್ತಾಯವಾದ ಕಾರಣ ಮತ್ತು ಈ ಕಂಪನಿಯ ಮತ್ತೊಂದು ಗಣಿಗುತ್ತಿಗೆ ಪ್ರಕರಣದಲ್ಲಿ ಸರ್ಕಾರಕ್ಕೆ ಬಾಕಿ ಹಾಗೂ ಉಚ್ಛ ನ್ಯಾಯಾಲಯದಲ್ಲಿ ಪ್ರಕರಣಗಳು ಬಾಕಿ ಇರುವುದರಿಂದ ಕೇಂದ್ರ ಸರ್ಕಾರಕ್ಕೆ ವಿವರವಾದ ಅಂಶಗಳನ್ನು ಉಲ್ಲೇಖಿಸಿ ಪತ್ರ ಬರೆಯಲಾಗಿರುತ್ತದೆ. |
| **(ಇ)** | ಸದರಿ ಕಂಪನಿಯವರ ಗುತ್ತಿಗೆ ನವೀಕರಣದಲ್ಲಿ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪರಿಗಣಿಸದೆ ಇರುವ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಕೈಗೊಂಡಿದ್ದಲ್ಲಿ ವಿವರಗಳನ್ನು ಒದಗಿಸುವುದು) | M/s ACC Ltd., ರವರು ಹರಾಜಿನಲ್ಲಿ ಪಡೆದ ಕಣ್ಣೂರುವಾಡಿ ಲೈಮ್‌ಸ್ಟೋನ್ ಬ್ಲಾಕ್‌ನ Letter of Intent ಅವಧಿಯು ಮೂಲತಃ ದಿನಾಂಕ:03.01.2024 ಕ್ಕೆ ಅಂತ್ಯಗೊಂಡಿರುತ್ತದೆ.<br><br>ತದನಂತರ 02 ವರ್ಷ ಅವಧಿ ವಿಸ್ತರಿಸಲು ರಾಜ್ಯ ಸರ್ಕಾರಕ್ಕೆ ಮೇಲ್ಕಂಡ ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ ದಿನಾಂಕ:03.01.2026ರವರೆಗೆ Letter of Intent ಅವಧಿ ವಿಸ್ತರಿಸಿದೆ. ಸದರಿ ಅವಧಿ ಮುಕ್ತಾಯವಾದ ನಂತರ ಪುನಃ ಅವಧಿ ವಿಸ್ತರಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿರುವುದಿಲ್ಲ. ಕಾನೂನು ಇಲಾಖೆ ಅಭಿಪ್ರಾಯ ಬಂದ ನಂತರ ಯಾವುದೇ Letter of Intent ಅವಧಿ ವಿಸ್ತರಿಸಿರುವುದಿಲ್ಲ.<br><br>ಆದ್ದರಿಂದ, ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. |

ಸಂಖ್ಯೆ: ಸಿಐ 74 ಸಿಎಂಸಿ 2026

**(ಎಸ್.ಎಸ್. ಮಲ್ಲಿಕಾರ್ಜುನ್)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು